ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಕೆ.ಹರೀಶ್ ಕುಮಾರ್
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 227
ಉತ್ತರಿಸಬೇಕಾದ ದಿನಾಂಕ : 02.02.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಒಟ್ಟು ನಂದಿನಿ ಬೂತ್‌ಗಳು ಎಷ್ಟು; ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿರುವ ಒಟ್ಟು ಬೂತ್‌ಗಳು ಎಷ್ಟು;	ರಾಜ್ಯದಲ್ಲಿ ಒಟ್ಟು 1833 ನಂದಿನಿ ಪಾರ್ಲರ್/ಫ್ರಾಂಚೈಸಿಗಳಿವೆ. ನಗರ ಪ್ರದೇಶದಲ್ಲಿ 1519 ಹಾಗೂ ಗ್ರಾಮೀಣ ಪ್ರದೇಶದಲ್ಲಿ 314 ಬೂತ್ ಗಳಿರುತ್ತವೆ
ಆ)	ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನಂದಿನಿ ಪಾರ್ಲರ್/ನಂದಿನಿ ಬೂತ್‌ಗಳ ಫ್ರಾಂಚೈಸಿಯನ್ನು ಪಡೆಯುವುದು ಹೇಗೆ; ಅದಕ್ಕೆ ಇರುವ ಮಾನದಂಡ ಗಳೇನು; ಫ್ರಾಂಚೈಸಿಯನ್ನು ಪಡೆಯುವವರಿಗೆ ಸಿಗುವ ಸೌಲಭ್ಯಗಳೇನು;	ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾತ್ರ ಮಾರಾಟ ಮಾಡುವ ಸ್ಥಳಗಳಿಗೆ ಬೂತ್, ಫ್ರಾಂಚೈಸಿ ಅಥವಾ ಪಾರ್ಲರ್ ಗಳೆಂದು ಕರೆಯಲಾಗುವುದು. 1. ಜನಸಂಖ್ಯೆ ಹಾಗೂ ಬೇಡಿಕೆಗೆ ಅನುಗುಣವಾಗಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ರೀಟೇಲ್ ದರದಲ್ಲಿ ಪೂರೈಸಲು ಕ್ರಮಕೈಗೊಳ್ಳಲಾಗುತ್ತಿದೆ. 2. ಸ್ಥಳಿಯ ಪ್ರದೇಶದಲ್ಲಿರುವ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನ ಮಾರಾಟ ಮಾಡಲು ಅಸಕ್ತರನ್ನು ಗುರುತಿಸಲಾಗುವುದು, ಹಾಗೂ ಕೆಲವೊಮ್ಮೆ ನೇರವಾಗಿ ಆಸಕ್ತರು ಅರ್ಜಿಗಳನ್ನು ನೀಡಿದಲ್ಲಿ ಪರಿಶೀಲಿಸಿ ಅಗತ್ಯ ಕ್ರಮವಿಡಲಾಗುವುದು. 3. ಅರ್ಜಿದಾರರ ಮಾರಾಟ ಕೌಶಲ್ಯತೆ ಸ್ಥಳಿಯ ಜನಸಾಮಾನ್ಯರೊಂದಿಗೆ ಒಡನಾಟ ಹಾಗೂ ಬಂಡವಾಳವನ್ನು ಭರಿಸುವ ಸಾಮರ್ಥ್ಯಕ್ಕೆ ಅನುಗುಣವಾಗಿ ನೇಮಕ ಮಾಡಲಾಗುವುದು. 4. ಆಸಕ್ತರು ಆಯ್ದ ಸ್ಥಳಗಳಲ್ಲಿ ಬಂಡವಾಳ ಹೂಡಿ ಇತರೆ ಉತ್ಪನ್ನಗಳೊಂದಿಗೆ ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡಬೇಕಾಗುತ್ತದೆ. 5. ಪಾರ್ಲರ್/ಫ್ರಾಂಚೈಸಿಗಳಿಗೆ ಬ್ರಾಂಡಿಂಗ್‌ಅನ್ನು ಮಾಡಿಸುವುದು ಹಾಗೂ ರಿಯಾಯತಿ ದರದಲ್ಲಿ ಫ್ರೀಜರ್ ಮತ್ತು ಕೂಲರ್ ವ್ಯವಸ್ಥೆ ಹಾಲು ಒಕ್ಕೂಟಗಳು ಹಾಗೂ ಕೆ.ಎಂ.ಎಫ್ ಸಂಸ್ಥೆಯಿಂದ ಮಾಡಲಾಗುವುದು.
ಇ)	ಎಷ್ಟು ಕಿ.ಮೀ.ಗೆ ಒಂದರಂತೆ ನಂದಿನಿ ಬೂತ್‌ಗಳನ್ನು ಸ್ಥಾಪಿಸಬಹುದು ಇದಕ್ಕೆ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿರುವ ಮಾನದಂಡಗಳೇನು?	ನಗರ ಪ್ರದೇಶಗಳಲ್ಲಿ ಒಂದು ಅಥವಾ ಎರಡು ಕಿ.ಮೀ.ಗೆ ಒಂದರಂತೆ ಆಯಾ ಸ್ಥಳದ ಬೇಡಿಕೆ ಮತ್ತು ಜನಸಂಖ್ಯೆ ಆಧಾರದ ಮೇಲೆ ನಂದಿನಿ ಬೂತ್ ಸ್ಥಾಪಿಸಲು ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ: ಸಿಒ 15 ಸಿಸಿಬಿ 2021

ಎಸ್.ಟಿ. ಸೋಮಶೇಖರ್

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು